ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೌರಾಡಳಿತ ನಿರ್ದೇಶನಾಲಯಕ್ಕೆ ಮಂಜೂರಾಗಿರುವ ಅಧಿಕಾರಿಗಳು, ಅಧಿಕಾರೇತರರುಗಳ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಸಾಕಷ್ಟು ಹುದ್ದೆಗಳು ಖಾಲಿ ಇದ್ದರೂ ಇದುವರೆವಿಗೂ ಭರ್ತಿ ಮಾಡದಿರಲು ಕಾರಣಗಳೇನು?

ಇ) ಇದರಿಂದಾಗಿ ಹಲವಾರು ಕೆಲಸಗಳು ಬಾಕಿ ಇದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಅಧಿಕಾರಿಗಳ ಸಂಖ್ಯೆ 14

ಅಧಿಕಾರೇತರರುಗಳ ಸಂ: 75.

ಆ) ರಾಜ್ಯ ಹಣಕಾಸು ಆಯೋಗವು ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ವಿಷಯ ಸಮಿತಿಯು ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿರುತ್ತದೆ. ಈ ಬಗ್ಗೆ ಸರ್ಕಾರದ ಉನ್ನತ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಇ) ಇಲ್ಲ.

ಈ) ಪೌರಾಡಾಳಿತ ನಿರ್ದೇಶನಾಲಯವನ್ನು ಮುಂದುವರಿಸಬೇಕೆ? ಅಥವಾ ರದ್ದುಪಡಿಸಬೇಕೆ ಎಂಬ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಈ ಬಗ್ಗೆ ನಿರ್ಧಾರ ಕೈಗೊಂಡ ನಂತರ ಹುದ್ದೆಗಳನ್ನು ತುಂಬುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಸಮಸ್ಯೆ

105 (86)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ನಗರಾಭಿವೃದ್ಧಿ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾನ್ಯವಾಗಿ ನೀರಿನ ಸಮಸ್ಯೆ ಇರುವ ಪ್ರದೇಶಗಳು ಯಾವುವು? ಸದರಿ ಸಮಸ್ಯೆ ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) 1995-96, 1996-97, 1997-98ನೇ ಸಾಲಿನಲ್ಲಿ ಸದರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಬೋರ್‌ವೆಲ್‌ಗಳು, ಕೊಳವೆ ಬಾವಿಗಳ ಸಂಖ್ಯೆ ಎಷ್ಟು? ಅವುಗಳನ್ನು ಎಲ್ಲೆಲ್ಲಿ ಅಳವಡಿಸಲಾಗಿದೆ?

ಇ) ಇವುಗಳಲ್ಲಿ ಯಾವುದಕ್ಕೆ ವಿದ್ಯುತ್ ಮೋಟಾರ್ ಅಳವಡಿಸಲಾಗಿದೆ (ವಿವರ ನೀಡುವುದು)

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಚಾಮರಾಜ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನೀರಿನ ಸಮಸ್ಯೆ ಇರುವ ಪ್ರದೇಶಗಳಾವುವೆಂದರೆ ಜಯನಗರ, ಚಿನ್ನದಗಿರಿ ಕೊಪ್ಪಲು, ಅಶೋಕಪುರಂ, ಜನತಾನಗರ, ಕುವೆಂಪುನಗರದ ಕೆಲವು ಪ್ರದೇಶಗಳು; ಕೃಷ್ಣಮೂರ್ತಿಪುರಂ ಕೆಲವು ಭಾಗಗಳು, ಈ ಭಾಗಗಳಲ್ಲಿ ಹಾಲಿ ನೀರಿನ ಸರಬರಾಜು ವ್ಯವಸ್ಥೆ ಇದ್ದು ಸ್ವಲ್ಪ ಮಟ್ಟಿಗೆ ನೀರಿನ ತೊಂದರೆಗೆ ಒಳಗಾದ ಪ್ರದೇಶಗಳಾಗಿರುತ್ತವೆ.

ಸದರಿ ಪ್ರದೇಶಗಳಿಗೆ ಮೈಸೂರಿನ ಸಮಗ್ರ ನೀರು ಸರಬರಾಜುವಿನ ಅಭಿವೃದ್ಧಿಯ 8 ಎಂ.ಜಿ.ಡಿ.ಕಾಮಗಾರಿ ಕೆಲಸ ಮುಗಿದ ನಂತರ, ಹಾಲಿ ವ್ಯವಸ್ಥೆಯಿಂದ ಸ್ವಲ್ಪ ಭಾಗ ನೀರನ್ನು ಒದಗಿಸಿ ಮೇಲ್ಕಂಡ ಪ್ರದೇಶಗಳ ನೀರಿನ ತೊಂದರೆಯನ್ನು ನಿವಾರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಆ) 1995-96ನೇ ಸಾಲಿನಲ್ಲಿ ಕೊಳವೆ ಬಾವಿ ಕೊರೆದ ಸ್ಥಳಗಳು ಮತ್ತು ಸಂಖ್ಯೆ

1.	ಎ.ರಾಮಣ್ಣ ರಸ್ತೆ	1
2.	ಅಶೋಕಪುರಂ	2
3.	ಜನತಾನಗರ	2
4.	ಡಿ.ಸುಬ್ಬಯ್ಯ ರಸ್ತೆ	1
5.	ಮಹದೇಶ್ವರ ಎಕ್ಸ್‌ಟೆನ್‌ಷನ್	1

6. ಕುವೆಂಪುನಗರ	1
7. ಸರಸ್ವತಿಪುರಂ	1
	9

1996-97ರಲ್ಲಿ ಕೊರೆದ ಕೊಳವೆ ಬಾವಿಗಳು

1. ದಟ್ಟಗಳ್ಳಿ ಇ ಅಂಡ್ ಎಫ್ ಬ್ಲಾಕ್	1
2. ಜನತಾನಗರ	3
3. ಕಲಾಮಂದಿರ ಆವರಣ	1
4. ಡಿ.ದೇವರಾಜ ಅರಸ್ ರಸ್ತೆ	1
5. ತೊಣಚಿ ಕೊಪ್ಪಲು	1
6. ಸ್ವೀಪರ್ಸ್ ಕಾಲೋನಿ ವಿವಿ.ಮೊಹಲ್ಲಾ	1
7. ವಿಷನ್ ಆಸ್ಪತ್ರೆ ರಸ್ತೆ	1
8. ಸರಸ್ವತಿ ಪುರಂ	1
9. ಅಶೋಕ ಪುರಂ	1
ಒಟ್ಟು ಸಂಖ್ಯೆಗಳು	11

ಇ) 1997-98ರಲ್ಲಿ ಕೊಳವೆ ಬಾವಿ ಕೆಲಸವನ್ನು ಮೈಸೂರು ಮಹಾನಗರ ಪಾಲಿಕೆಯಿಂದ ಕೈಗೆತ್ತಿಕೊಳ್ಳಲಾಗಿದೆ. 1995-96ರಲ್ಲಿ ಕೊಳವೆ ಬಾವಿ ಕೊರೆದು ವಿದ್ಯುತ್ ಪಂಪು ಅಳವಡಿಸಿರುವುದು.

1. ಡಿ.ಸುಬ್ಬಯ್ಯ ರಸ್ತೆ -	1	ಸಂಖ್ಯೆ:- 5 ಹೆಚ್‌ಪಿ
2. ರಾಮಕೃಷ್ಣ ನಗರ -	1	ಸಂಖ್ಯೆ - 5 ಹೆಚ್‌ಪಿ

1996-97ರಲ್ಲಿ ವಿದ್ಯುತ್ ಅಳವಡಿಸುವುದು.

1. ಮಹದೇಶ್ವರ ಎಕ್ಸ್‌ಟೆನಷನ್ಸ್ -	1	ಸಂಖ್ಯೆ 7.5 ಹೆಚ್.ಪಿ.
2. ಜನತಾ ನಗರ -	1	ಸಂಖ್ಯೆ 6 ಹೆಚ್.ಪಿ

3. ಮಂಜುನಾಥಪುರದ ಹತ್ತಿರ - 1 ಸಂಖ್ಯೆ 5 ಹೆಚ್.ಪಿ

4. ಮಂಡಿಮೊಹಲ್ಲಾ ಪ್ರದೇಶದ ಹತ್ತಿರ - 1 ಸಂಖ್ಯೆ 5 ಹೆಚ್.ಪಿ

5. ದೊಡ್ಡ ಒಕ್ಕಲಿಗರ ಕೇರಿ - 1 ಸಂಖ್ಯೆ 5 ಹೆಚ್.ಪಿ

1997-98ರಲ್ಲಿ ಕೊಳವೆ ಬಾವಿಗಳನ್ನು ಕರ್ನಾಟಕ ಜಲ ಮಂಡಲಿಯಿಂದ ಕೊರೆದಿರುವುದಿಲ್ಲ.

ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದು.

107 (190)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ ಕ್ಷೇತ್ರ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ರೋಗಗ್ರಸ್ಥವೆಂದು ಗುರುತಿಸಿದೆ ಅವುಗಳು ಯಾವುವು?

ಆ) ಸದರಿ ಕೈಗಾರಿಕೆಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳನ್ನು ಸರ್ಕಾರ ಮನ್ನಾ ಮಾಡಿದೆಯೇ?

ಇ) ಮನ್ನಾ ಮಾಡಿದ್ದರೆ ಅದರ ಒಟ್ಟು ಮೊತ್ತವೆಷ್ಟು?

ಈ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):

ಅ) 5837 ಭಾರತೀಯ ರಿಜರ್ವ್ ಬ್ಯಾಂಕ್‌ನ ವರದಿಯ ಪ್ರಕಾರ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಈ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದ್ದು, ಕೆಳಕಂಡ ಸಹಾಯ ಸೌಲಭ್ಯಗಳನ್ನು ಒದಗಿಸಿ ಹೊಸ ಸರ್ಕಾರಿ ಆದೇಶವನ್ನು ದಿನಾಂಕ: 26-12-96ರಂದು ಹೊರಡಿಸಲಾಗಿದೆ.

1) ಮಾರ್ಜಿನ್ ಹಣದ ಸಹಾಯ